ಭಂಡರಾಗುತ್ತಾರೆ. ಹೆಂಡತಿಗೆ ಗೊತ್ತಾಗದಂತೆ ಎರಡೆರಡು ಮೊಬೈಲ್ ಫೋನ್‌ಗಳನ್ನು ನಿರ್ವಹಿಸುತ್ತಾ ಬದುಕುವುದನ್ನು ಗಂಡಸರು ರೂಢಿಸಿಕೊಂಡುಬಿಡುತ್ತಾರೆ.

ವಿಚಿತ್ರವೆಂದರೆ ಈತ ಅಂತಹ ದಾರಿ ತುಳಿದೇ ಇರಲಿಲ್ಲ. 'ಮಗುವಿನ ಆರೈಕೆಯಲ್ಲಿ ಎಲ್ಲಾ ನುಂಗಿಕೊಂಡು ಬಿಟ್ಟೆ' ಎಂದು ಹೇಳುವಾಗ ಅವನ ಕಣ್ಣುಗಳು ಆರ್ದ್ರವಾಗಿದ್ದವು. ವ್ಯಕ್ತಿಯೊಬ್ಬ ಲೈಂಗಿಕ ಬದುಕಿಲ್ಲದೆ ನಲವತ್ತೈದು ದಾಟುವುದು ಅತ್ಯಂತ ಖೇದದ ಸಂಗತಿ. ಅವನ ಪರಿಸ್ಥಿತಿ ನನಗೂ ಸಂಕಟವನ್ನು ತರಿಸಿತು. ಒಳ್ಳೆಯ ವ್ಯಕ್ತಿ, ಸುಂದರ ದೇಹ, ಆಕರ್ಷಕ ಸಂಬಳ – ಯಾವುದೂ ಕೆಲವೊಮ್ಮೆ ಮನುಷ್ಯನಿಗೆ ಸುಖ ತರುವುದಿಲ್ಲ ಎನ್ನುವ ಸಂಗತಿ ಕಾಡತೊಡಗಿತು. ಅವನ ಬಗ್ಗೆ ವಿಪರೀತ ಅನುಕಂಪವಾಯಿತು.

'ಹಾಗಿದ್ದರೆ ಬಿಡುಗಡೆಗೆ ಒಪ್ಪಿಕೊಂಡು ಬಿಡಿ. ಯಾಕೆ ಒಲ್ಲದ ವಿವಾಹ ಬಂಧನದಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತೀದ್ದೀರಿ' ಎಂದು ಸಲಹೆ ಕೊಟ್ಟೆ. ಅವನು ಗೋಣನ್ನು ಅಡ್ಡಡ್ಡ ಹಾಕುತ್ತಾ 'ಮಗಳು...' ಎಂದ. ಪತ್ನಿಯೊಂದಿಗೆ ಬಿಡುಗಡೆ ಎಂದರೆ ಅದು ಮಗಳ ಒಡನಾಟದ ಬಿಡುಗಡೆಯೂ ಹೌದು ಎನ್ನುವ ಕಹಿ ನನಗೆ ಈಗ ಅರ್ಥವಾಗತೊಡಗಿತು. ಕಾನೂನು ಎಂದಿಗೂ ಮಗುವನ್ನು ಇವನ ಸುಪರ್ದಿಗೆ ಒಪ್ಪಿಸಲು ಸಾಧ್ಯವಿಲ್ಲ. ಮಗು ಯಾವತ್ತಿಗೂ ತಾಯಿಯ ಹಕ್ಕು. ಈತ ಇಡೀ ಬದುಕಿನ ಬೇಗುದಿಯನ್ನೆಲ್ಲಾ ಆ ಮಗುವಿನ ಆರೈಕೆಯಲ್ಲಿ, ಅದರ ಯೋಗಕ್ಷೇಮದ ನಿರ್ವಹಣೆಯಲ್ಲಿ ನುಂಗಿದ್ದಾನೆ. ಮಗಳಿಲ್ಲದೆ ಬದುಕುವುದು ಅವನಿಗೆ ಸಾವಿಗಿಂತಲೂ ಘೋರವಾದದ್ದು.

'ಈಕೆ ಈಗಾಗಲೇ ಮೆನೋಪಾಸ್ ಹಂತದಲ್ಲಿದ್ದಾಳೆ. ಈ ಹೊತ್ತಿನಲ್ಲಿ ಅವಳೊಬ್ಬಳೇ ಬದುಕನ್ನು ಹೇಗೆ ಮಾಡುತ್ತಾಳೆ ಎಂದು ನನಗೆ ಹೆದರಿಕೆಯಾಗುತ್ತದೆ. ಹಣಕ್ಕೆ ಕೊರತೆಯಿಲ್ಲ. ಅವರಿಬ್ಬರ ಬದುಕನ್ನು ನಿಭಾಯಿಸುವಷ್ಟು ಪ್ರತಿ ತಿಂಗಳು ಹಣ ಕೊಡುವ ಶಕ್ತಿ ನನಗಿದೆ. ಇಷ್ಟು ದಿನವೇ ಹೊಂದಿಕೊಂಡು ಬದುಕಿದ್ದೇವೆ. ಮುಂದೆ ಇನ್ನಷ್ಟು ವರ್ಷ ಹಾಗೆಯೇ ಬಾಳಿದರೆ ದೇಹದ ಬಯಕೆಗಳ ಆರ್ಭಟವೂ ಮುಗಿದು ಹೋಗುತ್ತದೆ. ಈಗ ತಿಳಿಗೊಳದ ನೀರನ್ನು ಕಲಕಿ ರಾಡಿ ಮಾಡಬೇಕೆ?'

* * *

ಆದರೆ ಪತ್ನಿಯ ಜೊತೆಗಿನ ನನ್ನ ಮಾತುಕತೆ ಇಷ್ಟೊಂದು ಭಾವುಕವಾಗಿರಲಿಲ್ಲ. ಆಕೆಯಲ್ಲಿ ಸ್ಪಷ್ಟತೆಯಿತ್ತು ಮತ್ತು ದಿಟ್ಟತೆಯಿತ್ತು; ಕಣ್ಣಲ್ಲಿ ಕಣ್ಣಿಟ್ಟು ಮಾತಾಡುತ್ತಿದ್ದಳು. ನಸುಗಪ್ಪು ಬಣ್ಣದ ಆಕೆ ಈಗಲೂ ಮೂವತ್ತೈದರ ಆಸುಪಾಸಿನ ವಯಸ್ಸಿನವಳೇನೋ ಎನ್ನುವ ಅಂಗಸೌಷ್ಟವ ಉಳಿಸಿಕೊಂಡಿದ್ದಳು. ತುಸು ಕೋಲು ಮುಖದ, ಉದ್ದ ಮೂಗಿನ, ಆಳ ಕಣ್ಣುಗಳ ಆಕೆಯನ್ನು ನೋಡಿದರೆ ತಾನಾಗಿಯೇ ಗೌರವ ಮೂಡುವಂತಿತ್ತು. ಅತ್ಯಂತ ಕಾಳಜಿಯಿಂದ ಸೀರೆಯನ್ನುಟ್ಟು, ಮುಖವನ್ನು ತಿದ್ದಿ ತೀಡಿರುವುದು ಕಂಡಾಗ ಆಕೆಯ ಸೌಂದರ್ಯಪ್ರಜ್ಞೆಯ ಅರಿವಾಗುತ್ತಿತ್ತು.

'ಪತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಎಂದು ಸ್ಪಷ್ಟ ಉತ್ತರ ಕೊಡಲಾಗದ ಮೊಂಡು ಪ್ರಶ್ನೆಯೊಂದನ್ನು ಕೇಳಿದೆ.

'ಅವನು ತುಂಬಾ ಒಳ್ಳೆಯವನು. ಅದೇ ದೊಡ್ಡ ಸಮಸ್ಯೆ' ಎಂದಳು. ನಾನು ಗಲಿಬಿಲಿಗೊಂಡು ಆಕೆಯನ್ನು ನೋಡಿದೆ.

'ಅವನು ಈ ಸಂಸಾರದ ಸುಸ್ಥಿತಿಗಾಗಿ ಜೀವ ತೇಯುವುದನ್ನು ನೋಡಿದಾಗ ನನಗೆ ದುಃಖವಾಗುತ್ತದೆ. ಯಾವತ್ತೂ ನನಗೆ ಹಣದ ಕೊರತೆಯಿಲ್ಲದಂತೆ ಕ್ರೆಡಿಟ್ ಕಾರ್ಡ್ ಕೊಟ್ಟಿದ್ದಾನೆ. ಮನೆಯಲ್ಲಿ ಒಂದು ದೂಳಿನ ಕಣವೂ ಇರದಂತೆ ಸ್ವಚ್ಛವಾಗಿಡುತ್ತಾನೆ. ಮಾಡಿದ ಅಡುಗೆಯನ್ನು ಹೆಸರಿಡದಂತೆ ಸಂತೋಷದಿಂದ ಉಣ್ಣುತ್ತಾನೆ. ತಾನೇ ಎಲ್ಲಾ ಪಾತ್ರೆಗಳನ್ನು ತೊಳೆದಿಡುತ್ತಾನೆ. ಮಗಳ ಜವಾಬ್ದಾರಿಯಂತೂ ನನಗೆ ಒಂದಿಷ್ಟೂ ಹೊರೆಯಾಗದಂತೆ ನೋಡಿಕೊಂಡಿದ್ದಾನೆ. ಇತ್ತೀಚೆಗೆ ಅವನ ಒಳ್ಳೆಯತನವೇ ನನಗೆ ವಿಪರೀತ ಸಿಟ್ಟು ತರಿಸುತ್ತದೆ. ಅವನ ಮೇಲೆ ವಿನಾಕಾರಣ ರೇಗುತ್ತೇನೆ. ಆದರೆ ಅವನೆಂದೂ ನನ್ನ ಮೇಲೆ ಧ್ವನಿ ಎತ್ತಿಲ್ಲ' ಎಂದಳು.

'ಮದುವೆಯ ಬಿಡುಗಡೆಗೆ ನೀವೇ ಹೆಚ್ಚು ಆಸಕ್ತರಾಗಿದ್ದೀರಿ' ಎಂದೆ.

'ಅನುಕಂಪ, ಪ್ರೀತಿ, ಸೇವೆ, ಹಣದಿಂದ ಹೆಂಡತಿಯನ್ನು ಸಂತೃಪ್ತಿಗೊಳಿಸಲು ಸಾಧ್ಯವೆ? ಮದುವೆಯ ಸಂಬಂಧಕ್ಕೆ ಭದ್ರಬುನಾದಿಯೇ ಗಂಡು–